| ಐಸಿಸಿ ಕ್ರಿಕೆಟ್ ವರ್ಲ್ಡ್‌ಕಪ್ 2019 ವೇಳಾಪಟ್ಟಿ | | |
|---|---|---|
| ದಿನಾಂಕ | ತಂಡಗಳು | ಸಮಯ |
| 30 ಮೇ | ಇಂಗ್ಲೆಂಡ್/ದ.ಆಫ್ರಿಕಾ | ಮ. 3 |
| 31 ಮೇ | ಪಾಕಿಸ್ತಾನ/ವೆಸ್ಟ್‌ಇಂಡೀಸ್ | ಮ. 3 |
| 01 ಜೂನ್ | ನ್ಯೂಜಿಲೆಂಡ್/ಶ್ರೀಲಂಕಾ | ಮ. 3 |
| 01 ಜೂನ್ | ಅಫ್ಘಾನಿಸ್ತಾನ/ಆಸ್ಟ್ರೇಲಿಯಾ | ಸಂ. 6 |
| 02 ಜೂನ್ | ದ.ಆಫ್ರಿಕಾ/ಬಾಂಗ್ಲಾದೇಶ | ಮ. 3 |
| 03 ಜೂನ್ | ಪಾಕಿಸ್ತಾನ/ಇಂಗ್ಲೆಂಡ್ | ಮ. 3 |
| 04 ಜೂನ್ | ಅಫ್ಘಾನಿಸ್ತಾನ/ಶ್ರೀಲಂಕಾ | ಮ. 3 |
| 05 ಜೂನ್ | ದ.ಆಫ್ರಿಕಾ/ಭಾರತ | ಮ. 3 |
| 05 ಜೂನ್ | ಬಾಂಗ್ಲಾದೇಶ/ನ್ಯೂಜಿಲೆಂಡ್ | ಸಂ. 6 |
| 06 ಜೂನ್ | ಆಸ್ಟ್ರೇಲಿಯಾ/ವೆಸ್ಟ್‌ಇಂಡೀಸ್ | ಮ. 3 |
| 07 ಜೂನ್ | ಪಾಕಿಸ್ತಾನ/ಶ್ರೀಲಂಕಾ | ಮ. 3 |
| 08 ಜೂನ್ | ಇಂಗ್ಲೆಂಡ್/ಬಾಂಗ್ಲಾದೇಶ | ಮ. 3 |
| 08 ಜೂನ್ | ಅಫ್ಘಾನಿಸ್ತಾನ/ನ್ಯೂಜಿಲೆಂಡ್ | ಮ. 3 |
| 09 ಜೂನ್ | ಭಾರತ/ಆಸ್ಟ್ರೇಲಿಯಾ | ಮ. 3 |
| 10 ಜೂನ್ | ದ.ಆಫ್ರಿಕಾ/ವೆಸ್ಟ್‌ಇಂಡೀಸ್ | ಮ. 3 |
| 11 ಜೂನ್ | ಬಾಂಗ್ಲಾದೇಶ/ಶ್ರೀಲಂಕಾ | ಮ. 3 |
| 12 ಜೂನ್ | ಪಾಕಿಸ್ತಾನ/ಆಸ್ಟ್ರೇಲಿಯಾ | ಮ. 3 |
| 13 ಜೂನ್ | ಭಾರತ/ನ್ಯೂಜಿಲೆಂಡ್ | ಮ. 3 |
| 14 ಜೂನ್ | ಇಂಗ್ಲೆಂಡ್/ವೆಸ್ಟ್‌ಇಂಡೀಸ್ | ಮ. 3 |
| 15 ಜೂನ್ | ಶ್ರೀಲಂಕಾ/ಆಸ್ಟ್ರೇಲಿಯಾ | ಮ. 3 |
| 15 ಜೂನ್ | ದ.ಆಫ್ರಿಕಾ/ಅಫ್ಘಾನಿಸ್ತಾನ | ಸಂ. 6 |
| 16 ಜೂನ್ | ಪಾಕಿಸ್ತಾನ/ಭಾರತ | ಮ. 3 |
| 17 ಜೂನ್ | ವೆಸ್ಟ್‌ಇಂಡೀಸ್/ಬಾಂಗ್ಲಾದೇಶ | ಮ. 3 |
| 18 ಜೂನ್ | ಇಂಗ್ಲೆಂಡ್/ಅಫ್ಘಾನಿಸ್ತಾನ | ಮ. 3 |
| 19 ಜೂನ್ | ನ್ಯೂಜಿಲೆಂಡ್/ದ.ಆಫ್ರಿಕಾ | ಮ. 3 |
| 20 ಜೂನ್ | ಆಸ್ಟ್ರೇಲಿಯಾ/ಬಾಂಗ್ಲಾದೇಶ | ಮ. 3 |
| 21 ಜೂನ್ | ಇಂಗ್ಲೆಂಡ್/ಶ್ರೀಲಂಕಾ | ಮ. 3 |
| 22 ಜೂನ್ | ಭಾರತ/ಅಫ್ಘಾನಿಸ್ತಾನ | ಮ. 3 |
| 22 ಜೂನ್ | ವೆಸ್ಟ್‌ಇಂಡೀಸ್/ನ್ಯೂಜಿಲೆಂಡ್ | ಸಂ. 6 |
| 23 ಜೂನ್ | ಪಾಕಿಸ್ತಾನ/ದ.ಆಫ್ರಿಕಾ | ಮ. 3 |
| 24 ಜೂನ್ | ಬಾಂಗ್ಲಾದೇಶ/ಅಫ್ಘಾನಿಸ್ತಾನ | ಮ. 3 |
| 25 ಜೂನ್ | ಇಂಗ್ಲೆಂಡ್/ಆಸ್ಟ್ರೇಲಿಯಾ | ಮ. 3 |
| 26 ಜೂನ್ | ಪಾಕಿಸ್ತಾನ/ನ್ಯೂಜಿಲೆಂಡ್ | ಮ. 3 |
| 27 ಜೂನ್ | ವೆಸ್ಟ್‌ಇಂಡೀಸ್/ಭಾರತ | ಮ. 3 |
| 28 ಜೂನ್ | ಶ್ರೀಲಂಕಾ/ದ.ಆಫ್ರಿಕಾ | ಮ. 3 |
| 29 ಜೂನ್ | ಪಾಕಿಸ್ತಾನ/ಅಫ್ಘಾನಿಸ್ತಾನ | ಮ. 3 |
| 29 ಜೂನ್ | ನ್ಯೂಜಿಲೆಂಡ್/ಆಸ್ಟ್ರೇಲಿಯಾ | ಸಂ. 6 |
| 30 ಜೂನ್ | ಇಂಗ್ಲೆಂಡ್/ಭಾರತ | ಮ. 3 |
| 01 ಜುಲೈ | ಶ್ರೀಲಂಕಾ/ವೆಸ್ಟ್‌ಇಂಡೀಸ್ | ಮ. 3 |
| 02 ಜುಲೈ | ಬಾಂಗ್ಲಾದೇಶ/ಭಾರತ | ಮ. 3 |
| 03 ಜುಲೈ | ಇಂಗ್ಲೆಂಡ್/ನ್ಯೂಜಿಲೆಂಡ್ | ಮ. 3 |
| 04 ಜುಲೈ | ಅಫ್ಘಾನಿಸ್ತಾನ/ವೆಸ್ಟ್‌ಇಂಡೀಸ್ | ಮ. 3 |
| 05 ಜುಲೈ | ಪಾಕಿಸ್ತಾನ/ಬಾಂಗ್ಲಾದೇಶ | ಮ. 3 |
| 06 ಜುಲೈ | ಶ್ರೀಲಂಕಾ/ಭಾರತ | ಮ. 3 |
| 06 ಜುಲೈ | ಆಸ್ಟ್ರೇಲಿಯಾ/ದ.ಆಫ್ರಿಕಾ | ಮ. 3 |
| 09 ಜುಲೈ | 1ನೇ ಸೆಮಿಫೈನಲ್ | ಮ. 3 |
| 11 ಜುಲೈ | 2ನೇ ಸೆಮಿಫೈನಲ್ | ಮ. 3 |
| 14 ಜುಲೈ | ಫೈನಲ್ | ಮ. 3 |



ವಿಶ್ವಕಪ್ ಕ್ರಿಕೆಟ್ ಹಿನ್ನೆಲೆಯಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಶ್ರೀಲಂಕಾ ನಾಯಕ ದಿಮೂತ್ ಕರುಣರತ್ನೆ

ಕಟ್ಟಬಲ್ಲರೆನ್ನುವುದು ಇಂಗ್ಲೆಂಡ್ ತಂಡದ ಅಗ್ಗಳಿಕೆ. ಹೋದವರ್ಷದ ವಿಶ್ವಕಪ್ ನಂತರ 34 ಪಂದ್ಯಗಳಲ್ಲಿ ಈ ತಂಡ 300ಕ್ಕೂ ಹೆಚ್ಚು ರನ್‌ಗಳನ್ನು 50 ಓವರ್‌ಗಳಲ್ಲಿ ಗಳಿಸಿರುವ ಸಾಧನೆ ಮಾಡಿದೆ. ಇಂಥದೊಂದು ಶ್ರೇಯ ಈ ತಂಡಕ್ಕೆ ಮಾತ್ರ ಇರುವುದು. ಭಾರತ, ದಕ್ಷಿಣ ಆಫ್ರಿಕಾಕ್ಕೆ 20 ಸಲ ಮಾತ್ರ 300ರ ಗಡಿ ದಾಟಲು ಆಗಿರುವುದು. ಜಾನಿ ಬೇರ್‌ಸ್ಟೊ ತರಹದ ಸಹಜ ಪ್ರತಿಭೆ, ಜಾಸ್ ಬಟ್ಲರ್, ಜೇಸನ್ ರಾಯ್ ಅವರಂಥ ದಿಗ್ಗಜರನ್ನು ಎದುರಲ್ಲಿಟ್ಟುಕೊಂಡಿರುವ ನಾಯಕ ಇಯಾನ್ ಮಾರ್ಗನ್ ಖುದ್ದು ಒತ್ತಡದ ನೊಗವನ್ನು ಹೆಗಲ ಮೇಲೆ ಎಳೆದುಕೊಳ್ಳಬಲ್ಲರು. ಈ ಎಲ್ಲ ಬ್ಯಾಟ್ಸ್‌ಮನ್‌ಗಳ ಸರಾಸರಿ ಕಳೆದೊಂದು ವರ್ಷದಲ್ಲಿ 40ಕ್ಕೂ ಹೆಚ್ಚಾಗಿರುವುದು ಬ್ಯಾಟಿಂಗ್ ಸಾಮರ್ಥ್ಯಕ್ಕೆ ಸಾಕ್ಷಿ. ದಾಳಿಕೋರತನವೇ ಇಂಗ್ಲೆಂಡ್‌ಗೆ ಮುಳುವಾಗಿರುವ ಉದಾಹರಣೆಗಳೂ ಇವೆ. ಬೆನ್ ಸ್ಟೋಕ್ಸ್, ಮೊಯಿನ್ ಅಲಿ ಅವರಂಥ ಆಲ್‌ರೌಂಡರ್‌ಗಳ ಹೊಣೆಗಾರಿಕೆ ಹೆಚ್ಚಾಗಿದೆ. ವೆಸ್ಟ್‌ಇಂಡೀಸ್ ವಿರುದ್ಧ 6 ವಿಕೆಟ್ ನಷ್ಟಕ್ಕೆ 418 ರನ್ ಗಳಿಸಿದ ಸಾಧನೆ ಮಾಡಿದ್ದು ಇದೇ ಇಂಗ್ಲೆಂಡ್. ಶ್ರೀಲಂಕಾ ಎದುರು ಕಳೆದ ವರ್ಷ ಅಕ್ಟೋಬರ್‌ನಲ್ಲಿ 9 ವಿಕೆಟ್‌ಗೆ 132ಕ್ಕೆ ಕುಸಿದದ್ದೂ ಈ ತಂಡವೇ. ಹೀಗಾಗಿ ಸ್ಥಿರತೆಯ ಪ್ರಶ್ನೆ ಈ ತಂಡವನ್ನು ಕಾಡುತ್ತಿದೆ.

'ಡಿಫೆಂಡಿಂಗ್ ಚಾಂಪಿಯನ್ಸ್' ಎಂಬ ಹಣೆಪಟ್ಟಿ ಇದ್ದೂ ಆಸ್ಟ್ರೇಲಿಯಾ ಕ್ರಿಕೆಟ್ ಕಳೆದ ನಾಲ್ಕು ವರ್ಷಗಳಲ್ಲಿ ಅತ್ತಿತ್ತಲಾಗಿದೆ. ಎರಡು ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ಏಕದಿನದ ಪಂದ್ಯಗಳ ಒಂದೂ ಸರಣಿ ಗೆಲ್ಲಲಾಗದೇ ಇರುವುದೇ ಇದಕ್ಕೆ ಪುಷ್ಟಿ ಕೊಡುತ್ತದೆ. ಆ ಅವಧಿಯಲ್ಲಿ ಬರೀ 4 ಪಂದ್ಯಗಳಲ್ಲಿನ ಗೆಲುವು ಹಾಗೂ 19 ಸೋಲುಗಳು ಬಾಧಿಸಿವೆ. ಮಿಚೆಲ್ ಸ್ಟಾರ್ಕ್, ಪ್ಯಾಟ್ ಕಮಿನ್ಸ್ ಬೌಲಿಂಗ್ ದಾಳಿಯ ಮೊನಚನ್ನು ಯಾರೂ ಅಲ್ಲಗಳೆಯಲಾರರು. ಸ್ಟೀವ್ ಸ್ಮಿತ್ ಹಾಗೂ ಡೇವಿಡ್ ವಾರ್ನರ್ ಇಬ್ಬರೂ ಚೆಂಡು ವಿರೂಪ ಪ್ರಕರಣದ ಶಿಕ್ಷೆ ಅನುಭವಿಸಿದ ನಂತರ ತಂಡಕ್ಕೆ ಮರಳಿರುವುದು ಟಾನಿಕ್ ತರಹ ಕಾಣುತ್ತಿದೆ. ಐಪಿಎಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎಂಬ ಗೌರವ ಸಂಪಾದಿಸಿ, ಮುದ್ದು ಮಗಳಿಗೆ ಮುತ್ತಿಕ್ಕಿ ಬಂದಿರುವ ವಾರ್ನರ್ ತಮ್ಮ ತುಂಬಿದ ತೋಳುಗಳ ಕಡೆ ನೋಡುತ್ತಿದ್ದಾರೆ. ಸ್ಮಿತ್‌ಗೆ ತಮ್ಮ ಸೂಕ್ಷ್ಮಮತಿಯ ಆಟದ ಪುನರುತ್ಥಾನದ ಚಿಂತೆ. ಉತ್ತಮ ಆರಂಭ ಒದಗಿಸಬಲ್ಲ ಜೋಡಿಯ ಅಗತ್ಯ ಈಗ ತಮಗಿದೆ ಎನ್ನುವುದು ನಾಯಕ ಆ್ಯರನ್ ಫಿಂಚ್‌ಗೆ ತಿಳಿದಿದೆ. ಸೋಲುಗಳ ಗಾಯಗಳಿಗೆಲ್ಲ ಸ್ಮಿತ್–ವಾರ್ನರ್ ಪುನರಾಗಮನ ಮುಲಾಮು ಹಚ್ಚಬಲ್ಲದು ಎಂದು ಪರಿಣತರು ಅಭಿಪ್ರಾಯ ಪಡುತ್ತಿದ್ದಾರೆ. ವಿಶ್ವಕಪ್‌ನಂಥ ಘನ ಸಂದರ್ಭದಲ್ಲಿ ಆಸ್ಟ್ರೇಲಿಯಾ ಸಾಂಘಿಕ ಆಟದ ಅಚ್ಚರಿ ಒಡ್ಡುತ್ತಲೇ ಬಂದಿರುವುದರಿಂದ ಅದು ಪ್ರಮುಖ ಸ್ಪರ್ಧಿಯಂತೂ ಹೌದು.

ಹತ್ತು ತಂಡಗಳ 150 ಆಟಗಾರರು ಬ್ಯಾಟ್–ಬಾಲ್ ಹಿಡಿದು ಅದೃಷ್ಟ ಪರೀಕ್ಷೆಗೆ ಸಜ್ಜಾಗುತ್ತಿದ್ದಾರೆ. ಇವರಲ್ಲಿ ಯಾವೆಲ್ಲ ಮಿಂಚುಹುಳುಗಳು ಕಂಡಾವು ಎನ್ನುವುದಷ್ಟೇ ಈಗಿರುವ ಕುತೂಹಲ.

ಭಾರತ, ಆಸ್ಟ್ರೇಲಿಯಾ, ಇಂಗ್ಲೆಂಡ್ ಸೆಮಿಫೈನಲ್ಸ್ ಪ್ರವೇಶಿಸುವುದು ಗ್ಯಾರಂಟಿ ಎಂದು ಕಪಿಲ್‌ದೇವ್ ಭವಿಷ್ಯ ನುಡಿದಿದ್ದಾರೆ. ಹಾಗಿದ್ದರೆ ಸೆಮಿಫೈನಲ್ಸ್ ಆಡಬಹುದಾದ ಇನ್ನೊಂದು ತಂಡ ಯಾವುದು? ಅಥವಾ ಕಪಿಲ್ ಭವಿಷ್ಯವಾಣಿಯೇ ಸುಳ್ಳಾಗುವುದೇ? ನೋಡಬೇಕು.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in